ಬಂಟ್ವಾಳ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯದಲ್ಲಿ

ಸಿಸಿ ನಂ. 92/2022

ಫ್ರಾಸಾ : 02
ಚಾಸಾ : 03

| | | |
|---|---|---|
| ಹೆಸರು | : | ಮೊಹಮ್ಮದ್ ಆಸಿಫ್ |
| ತಂದೆಯ ಹೆಸರು | : | ಚೀಯಬ್ಬ |
| ಪ್ರಾಯ | : | 38 ವರ್ಷ |
| ಉದ್ಯೋಗ | : | ಕೂಲಿ |
| ವಾಸಸ್ಥಳ | : | ಪುದು ಗ್ರಾಮ |

ದಿಃ 20/01/2024 ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

1. ಪರಂಗಿಪೇಟೆಯಿಂದ ನನ್ನ ಹೆಂಡತಿ ಮನೆಯಾದ ಮೇಲ್ಕಾರಿಗೆ ಖಾಸಗಿ ಬಸ್ಸಿನಲ್ಲಿ ನಿಂತು ಪ್ರಯಾಣಿಸಿ ಹೋಗುವಾಗ ತಲಪಾಡಿಯ ಬಳಿ ಬಿ ಸಿ ರೋಡ್ ಕಡೆಯಿಂದ ಬರುತ್ತಿದ್ದ ಟಿಪ್ಪರ್ ಲಾರಿಯನ್ನು ರಾಂಗ್ ಸೈಡ್ ಗೆ ತಿರುಗಿಸಿ ಬೈಕಿಗೆ ಡಿಕ್ಕಿ ಪಡಿಸಿದ್ದನ್ನು ನಾನು ಬಸ್ಸು ಚಲಿಸುತ್ತಿರುವಾಗ ಬಸ್ಸಿನೊಳಗಿನಿಂದ ನಿಂತು ಸದರಿ ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ. ಸದರಿ ಅಪಘಾತ ಮದ್ಯಾಹ್ನ 2.15 ಗಂಟೆಗೆ ಅಗಿರುತ್ತದೆ. ಚಾಸಾ-2 ರವರನ್ನು ಪಾದರ್ ಮುಲ್ಲರ್ ಆಸ್ಪತ್ರೇಗೆ ಆಟೋದಲ್ಲಿ ನಾನು ಕರೆದುಕೊಂಡು ಹೋಗಿರುತ್ತೇನೆ. ಬೈಕ್ ನಲ್ಲಿ ಇಬ್ಬರು ಪ್ರಯಾಣಿಸುತ್ತಿದ್ದರು .

2. ಚಾಸಾ-2 ರವರ ತಲೆಗೆ ,ಕೈ, ಕಿವಿಗೆ ಮತ್ತು ದೇಹದ ಇತರ ಭಾಗಗಳಿಗೆ ಗಾಯಗಳಾಗಿದ್ದವು . ನಂತರ ಪಾದರ್ ಮುಲ್ಲರ್ ಆಸ್ಪತ್ರೇಯಿಂದ ಚಾಸಾ-2 ರವರನ್ನು ಯುನಿಟಿ ಆಸ್ಪತ್ರೇಗೆ ಕರೆದುಕೊಂಡು ಹೋಗಿರುತ್ತಾರೆಂದು ತಿಳಿದು ಬಂದಿರುತ್ತದೆ.

ಮತ್ತೊಬ್ಬ ದ್ವಿಚಕ್ರ ವಾಹನದಲಿಲ ಸಹ ಸವಾರನಾಗಿದ್ದ ವ್ಯಕ್ತಿಯು ಅಪಘಾತದಲ್ಲಿ ಮೃತರಾಗಿದ್ದಾರೆಂದು ಗೊತ್ತಾಯಿತು. ಟಿಪ್ಪರ್ ಲಾರಿಯ ಚಾಲಕನ ತಪ್ಪಿನಿಂದ ಅಪಘಾತವಾಗಿರುತ್ತದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ಆ ದಿನ ಟಿಪ್ಪರ್ ಲಾರಿಯ ಚಾಲಕನಾಗಿರುತ್ತಾನೆಂದು ಸಾಕ್ಷಿ ನೋಡಿ ಗುರುತಿಸಿದರು. ನಿಪಿ-1 ರಿಂದ 7 ಪೋಟೋದಲ್ಲಿ ಕಾಣುವ ವಾಹನಗಳನ್ನು ಸಾಕ್ಷಿ ನೋಡಿ ಗುರುತಿಸಿದರು.

(ಈ ಹಂತದಲ್ಲಿ ಮಾನ್ಯ ಎ ಪಿಪಿ ಯವರು ಸದರಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)

ಪಾಟೀ ಸವಾಲುಃ ಎಪಿಪಿಯವರಿಂದಃ -

3. ಅಪಘಾತವು ದಿ. 02.09.2021 ರಂದು ನಡೆಯಿತು ಎಂದರೆ ಸರಿ . ಆ ದಿನ ಬಿ ಸಿ ರೋಡ್ ಕಡೆಗೆ ಚಾಸಾ-1 ರವರ ಬಾಬ್ತು ಕೆಎ-703675 ಆಟೋರಿಕ್ಷಾದಲ್ಲಿ ನಾನು ಮತ್ತು ನನ್ನ ಸಂಬಂದಿ ಸೈಪುದಿನ್ ಹೊರಟಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿಯು ಟಿಪ್ಪರ್ ಲಾರಿಯನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ದ್ವಿಪಥ ರಸ್ತೆಯಾದ ಹೆದ್ದಾರಿಯಿಂದ ಡಿವೈಡರ್ ಬಳಿ ಓಮ್ಮೆಲೆ ಬಲ ಬದಿ ಅಂದರೆ ಹಳೆಯ ರಸ್ತೆ ಕಡೆ ತಿರುಗಿಸುವ ಸಮಯ ಬೈಕಿಗೆ ರಭಸವಾಗಿ ಡಿಕ್ಕಿ ಹೊಡೆಯಿತು ಎಂದರೆ ಸರಿ . ಸದರಿ ಬೈಕ ನಾವು ಹೋಗುತ್ತಿದ್ದ ಆಟೋ ಎದುರಿನಿಂದ ಅಂದರೆ ಮಂಗಳೂರು ಕಡೆಯಿಂದ ಹೋಗುತ್ತಿತ್ತು ಎಂದರೆ ಸರಿಯಲ್ಲ. ಸಾಕ್ಷಿ ನಿರಾಕರಿಸಿದ ಹೇಳಿಕೆ ಭಾಗವನ್ನು ನಿಪಿ- 10 ಎಂದು ಗುರುತಿಸಲಾಯಿತು.

( ಪಾಟೀ ಸವಾಲುಃ ಆರೋಪಿತರ ಪರಃ ಶ್ರೀ ವಕೀಲರು ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ನ್ಯಾಯದ ಹಿತ ದೃಷ್ಟಿಯಿಂದ ಪಾಟಿ ಸವಾಲಿಗೆ ಮುಂದುಡಲಾಯಿತು. )

ನನ್ನ ಉಕ್ತಲೇಖನಾ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಲಾಗಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,
ಬಂಟ್ವಾಳ